# ಆಹಾ ಸುದ್ದಿ!

★ ಸಸಿತೋಟ



ಈ ನಾಯಿ 'ಬೋಧಿ' ಪುರುಷರ ಉಡುಪಿನ ರೂಪದರ್ಶಿಯಾಗಿ ಹೊರಹೊಮ್ಮಿದೆ. ಇದರ ಮಾಲೀಕರಾದ ಡೇವ್ ಮತ್ತು ಯೇನಾ ಹವ್ಯಾಸಕ್ಕೆಂದು ತಮ್ಮ ನಾಯಿಗೆ ವಿವಿಧ ಉಡುಪು ತೊಡಿಸಿ ಫೋಟೋಗಳನ್ನು ಅಂತರ್ಜಾಲದಲ್ಲಿ ಹರಿಯಬಿಟ್ಟರು. ಈಗ 4-5 ಉಡುಪುಗಳ ಕಂಪೆನಿಗಳು ಈ ಬೋಧಿಯನ್ನು ರೂಪದರ್ಶಿಯಾಗಿ ಬಳಸಲು ಮುಂದಾಗಿವೆ. ಉದ್ಯೋಗಕ್ಕೆ ಬೈ ಹೇಳಿರುವ ನಾಯಿಯ ಮಾಲೀಕರು ಈಗ ರೂಪದರ್ಶಿ ನಾಯಿಯ ಏಜೆಂಟ್‌ಗಳಾಗಿ ಬದಲಾಗಿಬಿಟ್ಟಿದ್ದಾರೆ. ನಾಯಿ ಅದೃಷ್ಟವೋ, ನಾಯಿ ಮಾಲೀಕರ ಅದೃಷ್ಟವೋ!




ಟೋಕಿಯೋದಲ್ಲಿ ನಡೆದ ಪ್ರದರ್ಶನದಲ್ಲಿ ರೊಬಾಟ್ 'ನೆಕ್ಸ್ಟ್ಏಜ್' ಬಂದವರಿಗೆಲ್ಲ ಕಾಫಿ ಬೆರೆಸಿ ಕೊಟ್ಟಿತಂತೆ. ಕೈಗಳನ್ನು ಬಳಸಿ ಕಾಫಿಗೆ ಸಕ್ಕರೆ, ಕ್ರೀಂ, ಚಾಕೊಲೇಟ್ ಎಂದೆಲ್ಲ ಬೆರೆಸಿ ಕೊಟ್ಟು ಬಂದವರನ್ನು ಚಕಿತಗೊಳಿಸಿತು. ಕಾಫಿಯ ರುಚಿ ಕೆಟ್ಟು, ಗ್ರಾಹಕನಿಗೂ ತಲೆ ಕೆಟ್ಟು ನಾಲ್ಕು ಬಯ್ದರೂ ರೊಬಾಟ್‌ಗೆ ಸಿಟ್ಟೇರಿ ತಿರುಗಿ ಬಯ್ಯುವುದಿಲ್ಲ, ಅಷ್ಟರಮಟ್ಟಿಗೆ ಗ್ರಾಹಕ ಮತ್ತು ಕೆಫೆ ಮಾಲೀಕ ಇಬ್ಬರೂ ಸೇಫ್!

ಕ್ಯಾಲಿಫೋರ್ನಿಯಾದಲ್ಲಿ ತನ್ನ ಮಾಲೀಕನ ಮನೆಯಿಂದ ನಾಲ್ಕು ವರ್ಷಗಳ ಹಿಂದೆ ತಪ್ಪಿಸಿಕೊಂಡಿದ್ದ ಸಾಕು ಗಿಳಿ ಮತ್ತೆ ವಾಪಸ್ಸು ಬಂದಿದೆ. ಮಾಲೀಕ ಡೆರೆಕ್‌ನಿಗೆ ಗಿಳಿಯನ್ನು ಕಂಡು ಖುಷಿಯಾದರೂ ಅದರ ಮಾತು ಕೇಳಿದ ಮೇಲೆ ಪೆಚ್ಚಾದನಂತೆ. ಬ್ರಿಟಿಷ್ ಉಚ್ಚಾರದಲ್ಲಿ ಇಂಗ್ಲಿಷ್ ಶಬ್ದಗಳನ್ನು ಉದುರಿಸುತ್ತಿದ್ದ ಅದು ಈಗ ಸ್ಪಾನಿಷ್‌ನಲ್ಲಿ ಮಾತನಾಡಿ ಗೊಂದಲ ಎಬ್ಬಿಸುತ್ತಿದೆಯಂತೆ. ಯಾರ ಯಾರ ಹೆಸರನ್ನೋ ಕೂಗುತ್ತ ಗಲಿಬಿಲಿ ಮಾಡುತ್ತದಂತೆ. ವಿದೇಶಕ್ಕೆ ಹೋಗಿ ಬಂದ ಮಗ ಅಲ್ಲಿಯ ಭಾಷೆ, ಸಂಸ್ಕೃತಿ ಬಿಂಬಿಸಿ ತಂದೆ- ತಾಯಿಗೆ ಕಕ್ಕಾಬಿಕ್ಕಿ ಮಾಡುವುದಿಲ್ಲವೇ!

ಇಂಗ್ಲೆಂಡ್‌ನ ಈಸ್ಟ್ ಆಂಗ್ಲಿಯ ವಿಶ್ವವಿದ್ಯಾನಿಲಯದ ಇಬ್ಬರು ವಿದ್ಯಾರ್ಥಿಗಳು 'ಭವಿಷ್ಯದ ನಾಯಕರ ಸವಾಲು' ಸ್ಪರ್ಧೆಯಲ್ಲಿ ಹೊಸ ಯೋಜನೆ ಮುಂದಿಡಲಿದ್ದಾರೆ. ಪರಿಸರ ಉಳಿಸಲು ಮುಂದಾಗಿರುವ ಅವರು, ವಿವಿಯ ಎಲ್ಲಾ 15 ಸಾವಿರ ವಿದ್ಯಾರ್ಥಿಗಳು ಸ್ನಾನ ಮಾಡುವಾಗಲೇ ಮೂತ್ರ ವಿಸರ್ಜಿಸಿದರೆ, ಫ್ಲಷ್ ಮಾಡಲು ಬಳಸುವ ಲಕ್ಷಾಂತರ ಲೀಟರ್ ನೀರು ಉಳಿಸಬಹುದೆಂದು ಸಂಶೋಧನೆ ಮಾಡಿದ್ದಾರಂತೆ. ಸ್ವಮೂತ್ರ ಪಾನ ಆಯಿತು, ಈಗ ಸ್ವಮೂತ್ರ ಸ್ನಾನ!

ಕ್ಯಾಲಿಫೋರ್ನಿಯ ರೈತ ಟೋನಿ ಬೆಳೆದಿರುವ ಕುಂಬಳಕಾಯಿ. ಫ್ರಾಂಕನ್‌ಸ್ಟೀನ್ ಪೆಂಡಭೂತದ ಆಕಾರದಲ್ಲಿದೆ. ಈ ಆಕಾರ ತರಲು ಟೋನಿ ನಾಲ್ಕು ವರ್ಷಗಳ ಕಾಲ ಶ್ರಮಿಸಿ, 40 ಸಾವಿರ ಡಾಲರ್ ಖರ್ಚು ಮಾಡಿದನಂತೆ. ಈ ಬಾರಿ ಹ್ಯಾಲೊವೀನ್ ಹಬ್ಬಕ್ಕೆ 5,500 ಕುಂಬಳಕಾಯಿಗಳನ್ನು ಬೆಳೆದಿದ್ದು, ತಲಾ ಒಂದಕ್ಕೆ ನೂರು ಡಾಲರ್‌ನಂತೆ ಮಾರಾಟ ಆಗುತ್ತಿದೆಯಂತೆ. ಮುಖವಾಡವಾಗಿ ಮರು ಕ್ಷಣ ಕಸದ ಬುಟ್ಟಿ ಸೇರುವ, ಆಹಾರವಾಗಿ ಹೊಟ್ಟೆ ಸೇರುವ ಕುಂಬಳಕಾಯಿಯೂ ಕಲೆಯ ಮೂಲವೇ!






ಬ್ರಿಟಿಷ್ ಬ್ಯಾಂಡ್ ಡಿಫೀಲ್ಡ್ ಗ್ರೀನ್‌ಲ್ಯಾಂಡ್‌ನಲ್ಲಿ ದೊಡ್ಡದಾದ ಹಿಮದ ಬಂಡೆಯ ಮೇಲೆ ಇತ್ತೀಚೆಗೆ ಕಾರ್ಯಕ್ರಮ ನಡೆಸಿಕೊಟ್ಟಿತು. ಅಭಿಮಾನಿಗಳು ಬೆರಳೆಣಿಕೆಯಲ್ಲಿ ಸೇರಿದ್ದರಂತೆ. ಹೆಚ್ಚಿನವು ಗ್ರೀನ್‌ಲ್ಯಾಂಡ್‌ನ ಹಿಮ ಪರಿಸರದಲ್ಲಿ ವಾಸಿಸುವ ನಾಲ್ಕು ಕಾಲಿನವು. ಶಾಂತ ಪರಿಸರದಲ್ಲಿ ಗದ್ದಲ ಎಬ್ಬಿಸಿದವರ ವಿರುದ್ಧ ಅವು ಪ್ರತಿಭಟನಾ ಸಭೆ ನಡೆಸಿದ್ದವೋ ಏನೋ! ಶ್ರೋತೃಗಳೆಂದು ತಿಳಿದುಕೊಂಡು ಬ್ಯಾಂಡ್‌ನವರು ಜಪ್ಪಿದ್ದೇ ಜಪ್ಪಿದ್ದು.